**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

ಅಸಲು ದಾವೆ ನಂ.**124/2009**

**ದಿನಾಂಕಃ 11-09-2024,** ಡಿ **ಡಬ್ಲ್ಯೂ–1**

ಮುಂದುವರೆದ ಪಾಟೀ ಸವಾಲು ಃ ಶ್ರೀ ಎ ಎಸ್ ಎಂ ವಕೀಲರಿಂದಃ

ಮರಣ ಶಾಸನದ ಪ್ರಕಾರ ನಾನು ಅರ್ಜಿಯನ್ನು ಸಲ್ಲಿಸಿ ಪ್ರೊಬೇಟ್ ನ್ನು ಪಡೆದು ದಾವಾ ಆಸ್ತಿಗಳ ಸ್ವಾಧೀನವನ್ನು ನನಗೆ ಕೊಡಿಸುವಂತೆ 2018 ರಿಂದ ಇಲ್ಲಿಯವರೆಗೂ ಯಾವುದೇ ಆದೇಶ ಪಡೆದಿಲ್ಲ. ನಾನು ಯಾವುದೇ ದಾವೆಯನ್ನು ಹೂಡಿಲ್ಲ. ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಮರಣ ಶಾಸನ ಪತ್ರವನ್ನು ಯಾರು ಬರೆದರು, ಬರೆಸಿದರು ಎಂದು ನಾನು ಮರಣ ಶಾಸನ ಪತ್ರ ಬರೆದಿರುವ ವಿಚಾರ ಗೊತ್ತಾದ ನಂತರ ಕೇಳಿ ತಿಳಿದುಕೊಂಡಿಲ್ಲ, ಸಾಕ್ಷಿಯು ಮುಂದುವರೆದು ಓದಿ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಮರಣ ಶಾಸನ ಪತ್ರದಲ್ಲಿ ನೀಲಿ ಶಾಯಿಯಲ್ಲಿ ಸಹಿಯನ್ನು ಮಾಡಿರುತ್ತಾರೆ.

1ನೇ ಪ್ರತಿವಾದಿಯ ಕುಟುಂಬಕ್ಕೆ ಹಕ್ಕು ಖುಲಾಸೆ ಆಧಾರದ ಮೇಲೆ ಯಾವುದೇ ಆಸ್ತಿಗಳು ಬಂದಿಲ್ಲ. ನನ್ನ ತಾತ ಒಟ್ಟು ಕುಟುಂಬದ ಪರವಾಗಿ ಆಸ್ತಿಗಳನ್ನು ಯಾರು ಯಾರಿಂದ ಪಡೆದರು ಎಂದು ನನಗೆ ಹೇಳಿಲ್ಲ, ಸಾಕ್ಷಿಯು ಮುಂದುವರೆದು ನನ್ನ ಸ್ವಯಾರ್ಜಿತ ಆಸ್ತಿಗಳು ಎಂದು ನನ್ನ ತಾತ ಹೇಳಿದ್ದಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಕ್ರಯ ಪತ್ರಗಳನ್ನು ಪೂರ್ತಿ ಓದಿ ತಿಳಿದುಕೊಂಡಿಲ್ಲ. ಸದರಿ ಕ್ರಯ ಪತ್ರಗಳಲ್ಲಿ ಯಾರು ಯಾರಿಂದ ಖರೀದಿಸಿದ್ದಾರೆ ಎಂದು ಓದಿ ತಿಳಿದುಕೊಂಡಿಲ್ಲ. 1ನೇ ಪ್ರತಿವಾದಿ ಒಟ್ಟು ಕುಟುಂ ಬದ ಪರವಾಗಿ ದಾವಾ ಆಸ್ತಿಗಳನ್ನು ಖರೀದಿಸಿದ ನಂತರ ವಾದಿ ಮತ್ತು 2ನೇ ಪ್ರತಿವಾದಿಯ ವಿರುದ್ಧ ಯಾವುದೇ ದಾವೆಯನ್ನು ಹೂಡಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗೆ ಇರುವ

ರೀತ್ಯಾ 2ನೇ ಪ್ರತಿವಾದಿಗೂ ಸಮಾನ ಹಕ್ಕು ಇದೆ ಎಂದರೆ ಸರಿ. ದಾವಾ ಆಸ್ತಿಗಳನ್ನು ನಾನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 2018 ರವರೆಗೂ ನ್ಯಾಯಾಲಯದಲ್ಲಿ ಹಾಜರಾಗಿದ್ದು, ಅವರು ಮರಣ ಶಾಸನ ಪತ್ರ ಮಾಡಿದ್ದಾರೆ ಎನ್ನಲಾದ ವಿಚಾರವನ್ನು ಹೇಳದೆ ಇರುವುದರಿಂದ ಮರಣ ಶಾಸನ ಪತ್ರವನ್ನು ನಾನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
**ಅರಕಲಗೂಡು**